**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಲ್.ಎ.ಸಿ ಅಪೀಲು ಸಂಖ್ಯೆ-367/2025**

ಎ.ಡಬ್ಲ್ಯೂ-1

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 05-02-2026**

**ಮಧ್ಯಂತರ ಅರ್ಜಿ 1ರ ಮೇಲಿನ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಸಾಕ್ಷಿದಾರರು ಮಧ್ಯಂತರ ಅರ್ಜಿ 1ರ ಮೇಲೆ ತಮ್ಮ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.

**ಪಾಟೀಸವಾಲುಃ 1ನೇ ಎದುರುದಾರರ ಪರ ಡಿಜಿಪಿ ರವರಿಂದ**

ಸುಮಾರು 5-6 ವರ್ಷದ ಹಿಂದೆ ಎಲ್ ಎ ಸಿ ನಂ.29/2017 ರಲ್ಲಿ ಆದ ಆದೇಶದ ಬಗ್ಗೆ ತಿಳಿದು ಬಂತು. ನ್ಯಾಯಾಲಯ ನೀಡಿದ ಪರಿಹಾರವನ್ನು ನಾವು ಪಡೆದುಕೊಂಡಿರುತ್ತೇವೆ. ನಾನು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದೆ.. ನಾನು ಖಾಯಿಲೆಯಿಂದ ಬಳಲುತ್ತಿದ್ದೆ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನ್ಯಾಯಾಲಯ ಎಲ್ ಎ ಸಿ ನಂ. 29/2017 ರಲ್ಲಿ ನೀಡಿದ ಪರಿಹಾರದಿಂದ ತೃಪ್ತಗೊಂಡಿದ್ದ ನಾವು ಮೇಲ್ಮನವಿ ಸಲ್ಲಿಸಲು ಪ್ರಯತ್ನಿಸಲಿಲ್ಲ ಎಂದರೆ ಸರಿಯಲ್ಲ. ನಾನು ಈ ಮೇಲ್ಮನವಿ ಸಲ್ಲಿಸಲು ಆಗಿರುವ ಕಾಲವಿಳಂಬತೆ ಮನ್ನಿಸಲು ಯಾವುದೇ ಸಕಾರಣ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಾಲ ವಿಳಂಬತೆ ಮನ್ನಾ ಮಾಡಲು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮಧ್ಯಂತರ ಅರ್ಜಿಯಲ್ಲಿ ಕೇಳಿರುವ ಪರಿಹಾರ ಹೊಂದಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2ನೇ ಎದುರುದಾರರ ಪರ ವಕೀಲರಿಂದ ರವರಿಂದ**

2ನೇ ಎದುರುದಾರರ ಪರ ವಕೀಲರು 1ನೇ ಎದುರುದಾರರ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ತಾವೂ ಸಹ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.